**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1709/2023**

ಸಾಕ್ಷಿಯ ಹೆಸರುಃ ಸುಬ್ರಮಣ್ಯ ಎನ್ ಡಿ ಪ್ರಾಸಾ ಃ **6**
ತಂದೆ /ಗಂಡನ ಹೆಸರು ಃ ದೇವರಾಜಪ್ಪ ಚಾಸಾ ಃ **23**
ವಯಸ್ಸು ಃ **53**
ಉದ್ಯೋಗ ಃ ಸಹಾಯಕ ಸಬ್ ಇನ್ಸ್ಪೆಕ್ಟರ್
ವಾಸ ಸ್ಥಳ ಃ ಕುಶಾಲನಗರ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ25.11.2024**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು **2020** ರಿಂದ ಇಲ್ಲಿಯ ರವರೆಗೆ ಕುಶಾಲನಗರ ಸಂಚಾರಿ ಪೋಲಿಸ ಠಾಣೆಯಲ್ಲಿ ಸಹಾಯಕ ಸಬ್ ಇನ್ಸಪೆಕ್ಟರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ **16.06.2023** ರಂದು ಸಮಯ **1.15** ಎ ಎಂ ಗೆ ಚಾಸಾ **1** ರವರು ಠಾಣೆಗೆ ಹಾಜರಾಗಿ ನೀಡಿದ ಮುದ್ರಿತ ದೂರನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ **33/2023** ರಂತೆ ಪ್ರಕರಣ ದಾಖಲಿಸಿ ಪ್ರ ವ ವ ನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೆದಿಸಿಕೊಂಡಿರುತ್ತೇನೆ .

ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ **1** ಎಂದು ಗುರುತಿಸಲಾಗಿದ್ದು , ಸಾಕ್ಷಿ ಸಹಿಯನ್ನು ನಿಪಿ **1** ಬಿ ಎಂದು, ಪ್ರ ವ ವ ನ್ನು ನಿಪಿ **4** ಎಂದು, ಸಾಕ್ಷಿ ಸಹಿಯನ್ನು ನಿಪಿ **4** ಎ ಎಂದು ಗುರುತಿಸಲಾಯಿುತು.

ಪಾಟೀ ಸವಾಲುಃ ಶ್ರೀ ಹೆಚ್ ಆರ್ ಜೆ ವಕೀಲರಿಂದ **1** ನೇ ಆರೋಪಿ ಪರ

ದಿಃ **16.06.2023** ರಂದು ನಾನು ಗಸ್ತನಲ್ಲಿರುವಾಗ ಚಾಸಾ **24** ರವರು ದೂರವಾಣಿ ಕರೆ ಮಾಡಿ ಠಾಣೆಗೆ ಹಾಜರಾಗಿ ದೂರನ್ನು ಸ್ವೀಕರಿಸುವಂತೆ ತಿಳಿಸಿದ ಮೇರೆಗೆ ನಾನು ಠಾಣೆಗೆ ಹಾಜರಾಗಿ ದೂರನ್ನು ಹೊಂದಿಕೊಂಡಿರುತ್ತೇನೆ. ಮೇಲಾಧಿಕಾರಿಗಳ ಆದೇಶದಂತೆ ಚಾಸಾ **1** ರವರೊಂದಿಗೆ ಶಾಮೀಲಾಗಿ ಪ್ರ ವ ವ ನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ **1** ರವರು ಸ್ವಳೀಯರಾಗಿದ್ದು ನಮ್ಮೊಂದಿಗೆ ವಿಶ್ವಾಸದಿಂದ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಸಹಿಯ ಕೆಳಗೆ ದಿನಾಂಕ ನಮೂದಿಸಲು ಯಾವುದೆ ತೊಂದರೆ ಇರಲಿಲ್ಲ. ನಿಪಿ **1** ನ್ನು ಠಾಣಾ ಅಂಕಿ ಅಂಶಗಳಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**2** ನೇ ಆರೋಪಿ ಪರ ಶ್ರೀ ಹೆಚ್ ಸಿ ಎಂ ಕೆ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ .

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.